## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ**359/2020**

ಸಿ.ಡಬ್ಲ್ಯೂ-20 ಪಿ.ಡಬ್ಲ್ಯೂ-16

| | | |
|---|---|---|
| ಹೆಸರು | ಃ | ಉಮ್ಮಾ |
| ತಂದೆಃಗಂಡ | ಃ | ಟೋಮಾ |
| ವಯಸ್ಸು | ಃ | 65 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಕುಡಮುಡ ತಾಂಡಾ |

ದಿನಾಂಕಃ29.01.2024

ಸತ್ಯ ಪ್ರತಿಜ್ಞೆಯ ಮೇರೆಗೆ

---

### ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ

ಆರೋಪಿತರ ಪರಿಚಯ ಇರುವುದಿಲ್ಲ. ಚಾಸಾ-2 ರಿಂದ 6, 12, 13, 21, 22 ರವರ ಪರಿಚಯ ಇರುತ್ತದೆ. ಮೃತ ದಾಮು ನನ್ನ ತಮ್ಮ. ಮೃತ ರತ್ನಾಬಾಯಿ ನಮ್ಮ ಊರಿನವರು. ನನ್ನ ತಮ್ಮ ಮಹಾಗಾಂವದಿಂದ ಹೊರಟಿದ್ದನು. ರಿಕ್ಷಾ ಪಲ್ಟಿಯಾಗಿ ಮೃತಪಟ್ಟಿದ್ದನು. ಆಸ್ಪತ್ರೆಗೆ ತೆಗೆದುಕೊಂಡು ಹೋದ ನಂತರ ನಾವು ಹೋಗಿ ಮೃತ ದೇಹ ನೋಡಿರುತ್ತೇವೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾ ಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

### ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.

ದಿ.10.02.2020 ರಂದು ಸದರಿ ಘಟನೆ ನಡೆಯಿತು ಎಂದರೆ ಸರಿ. ಟಂಟಂ ಸಂಖ್ಯೆ ಕೆಎ-32/ಬಿ-1889 ರಲ್ಲ ಚಾಸಾ-8 ರಿಂದ 15 ರವರೊಂದಿಗೆ ಮೃತ ರತ್ನಾಬಾಯಿ, ದಾಮು ಹಾಗೂ ಅದಿತ್ಯರವರು ಹೋಗುತ್ತಿದ್ದರು ಎಂದರೆ ಸರಿ. ಮಹಾಗಾಂವ ಕ್ರಾಸದಿಂದ ಅಂಬಲಗಾ ಕಡೆ ಹೋಗುವಾಗ ಆರೋಪಿ ವಾಹನವನ್ನು ಅತಿ ವೇಗವಾಗಿ ಹಾಗೂ ನಿಶ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಪಲ್ಟಿ ಹೊಡೆಸಿರುತ್ತಾನೆ ಎಂದರೆ ಸರಿ. ಆಗ ರತ್ನಾಬಾಯಿ ಹಾಗೂ ದಾಮುರವರು ತೀರಿಕೊಂಡಿರುತ್ತಾರೆ ಎಂದರ ಸರಿ. ಚಾಸಾ-8 ರಿಂದ 15 ಹಾಗೂ ಆದಿತ್ಯರವರಿಗೂ ಗಾಯಗಳು ಆಗಿರುತ್ತವೆ ಎಂದರೆ ಸರಿ. ಘಟನೆ ಬಗ್ಗೆ ಚಾಸಾ-16 ರವರು ತಿಳಿಸಿರುತ್ತಾರೆ ಎಂದರೆ ಸರಿ. ನಾನು ಪೋಲಿಸರ ಎಂದುರು ಈ ಮೇಲೆ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

### ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಎ.ಕೆ. ವಕೀಲರಿಂದಃ

ನಾನು ಪ್ರಕರಣದ ಬಗ್ಗೆ ಮೊದಲ ಬಾರಿಗೆ ಹೇಳಿಕೆ ನೀಡುತ್ತಿದ್ದೇನೆ ಎಂದರ ಸರಿ. ಘಟನ ನಡೆಯುವಾಗ ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. ನಾನು ಘಟನಾ ಸ್ಥಳದಲ್ಲಿ ಇರದೇ ಇದ್ದ ಕಾರಣ ಸ್ಥಳದಲ್ಲಿ ಏನಾಗಿದೆ ಎಂದು

ಹೇಳಲು ಆಗುವುದಿಲ್ಲ ಎಂದರ ಸರಿ. ಘಟನೆ ಬಗ್ಗೆ ನನಗೆ ಚಾಸಾ-16, 5 ರವರು ತಿಳಿಸಿರುತ್ತಾರೆ. ನನಗೆ ಎಷ್ಟು ಗಂಟೆಗೆ ಮಾಹಿತಿ ನೀಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ನಾನು ಘಟನೆ ಬಗ್ಗೆ ಗೊತ್ತಾದಾಗ ಹೊಲದಲ್ಲಿ ಇದ್ದೇನು. ಘಟನೆ ಆದ ಸ್ಥಳದಲ್ಲಿ ರಸ್ತೆ ಸರಿ ಇರಲಿಲ್ಲ ಎಂದರೆ ಸಾಕ್ಷಿ ಡಾಂಬರ ರಸ್ತೆ ಇತ್ತು ಹಾಗೂ ಇಳಿಕೆ ಇತ್ತು ಎಂದು ಹೇಳುತ್ತಾರೆ. ಸದರಿ ರಸ್ತೆಯಲ್ಲಿ ಅಲ್ಲಲ್ಲಿ ಗುಂಡಿಗಳು ಇವೆ ಎಂದರೆ ಸರಿಯಲ್ಲ. ಘಟನೆ ಸ್ಥಳದಲ್ಲ ತಿರುವು ಇದೆ ಎಂದರೆ ಸರಿ. ಸಾಮಾನ್ಯವಾಗಿ ತಿರುವು ಇದ್ದ ಕಾರಣ ವಾಹನಗಳು ನಿಧಾನವಾಗಿ ಹೋಗುತ್ತವೆ ಎಂದರ ಸರಿ. ಆರೋಪಿ ತಿರುವು ಇದ್ದ ಕಾರಣ ನಿಧಾನವಾಗಿ ವಾಹನ ಚಲಾಯಿಸುತ್ತಿದ್ದ ಎಂದರೆ ಸಾಕ್ಷಿ ಆರೋಪಿ ವಾಹನ ಹೇಗೆ ಚಲಾಯಿಸುತ್ತಿದ್ದ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಘಟನೆಯನ್ನುನೋಡಿರುವುದಿಲ್ಲ ಮೃತ ನನ್ನ ತಮ್ಮನಿದ್ದ ಕಾರಣ ಸುಳ್ಳು ಸಾಕ್ಷ್ ನುಡಿಯುತ್ತಿದ್ದೇನೆ ಎಂದರ ಸರಿಯಲ್ಲ. ಆರೋಪಿಗೂ ಘಟನೆಗೂ ಯಾವುದೇ ಸಂಬಂಧ ಇರುವುದಿಲ್ಲ, ನನ್ನ ತಮ್ಮನಿಗೆ ಪರಿಹಾರ ಧನ ಬರಬೇಕು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು,
ಆಳಂದ